Sri B. D. JATTI :—The presumption that the officers coming from the Revenue Department have no experience is wrong.

ಶ್ರೀಮತಿ ರತ್ನಮ್ಮ ಮಾಧವರಾವ್.—ರೆವಿನ್ಯೂ ಇರಾಖೆಯವರನ್ನು ತೆಗೆದುಕೊಳ್ಳುವುದರಿಂದ ಈ ಇರಾಖೆಯಲ್ಲಿರತಕ್ಕ ಅಧಿಕಾರಿಗಳಿಗೆ ಪ್ರಮೋಷನ್ ಸಿಕ್ಕಲು ತೊಂದರೆಯಾಗುವುದಿಲ್ಲವೇ ?

Sri B. D. JATTI:—No, Sir. The promotions depend upon Cadre and Recruitment Rules which have been approved by the Government and we have taken the approval of the Public Service Commission also.

Grant of S. S. L. C. Scale to V. T. C. passed Teachers in ex-Mysore Area.

*Q.—500. Sri R. N. LAKSHMIPATHI (Gouribidanur).—

Will the Government be pleased to state :—

(a) whether the teachers of Ex-Mysore area who had passed V. T. C. of three years and who had later passed in English only were deemed to have passed the S.S.L.C. ;

(b) if so, whether they have been given the grade of S.S.L.C. passed teachers ?

A.—Sri S. R. KANTHI (Minister for Education).—

(a) No.

(b) Does not arise.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ವಿ. ಟಿ. ಸಿ.ಯಲ್ಲಿ ತೇರ್ಗಡೆ ಹೊಂದಿ ನಂತರ ಇಂಗ್ಲೀಷಿನಲ್ಲಿ ತೇರ್ಗಡೆ ಹೊಂದಿದವರಿಗೆ ಎಸ್. ಎಸ್. ಎಲ್. ಸಿ ಆಗಿರುವವರಿಗೆ ಕೊಡುವ ಗ್ರೇಡನ್ನು ಕೊಟ್ಟಿಲ್ಲವೆ ?

†ಶ್ರೀ ಎಸ್. ಆರ್. ಕಂಠಿ.—ಇಲ್ಲ. ಅವರಿಗೆ ಬೇರೆ ಬೇರೆ ಗ್ರೇಡುಗಳಿವೆ. ಈಗ ಒಂದೇ ಮಾಡ ಬೇಕೆಂದು ನರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆ ವಿಚಾರವನ್ನು ಇತ್ಯರ್ಥಮಾಡಲು ಎಷ್ಟು ಕಾಲ ಬೇಕು ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಹೇಳುವುದಕ್ಕಾಗುವುದಿಲ್ಲ, ಶಕ್ಯವಾದರೆ ಆದಷ್ಟು ತೀವ್ರ ಮಾಡೋಣ. ಇವರಲ್ಲಿ ಆರ್ಥಿಕ ಪ್ರಶ್ನೆಯಿದೆ, ಎಷ್ಟು ಖರ್ಚಾಗುತ್ತದೆ ಎಂದು ನೋಡಬೇಕಾಗುತ್ತದೆ.

Mr. SPEAKER.—I put Question No. 513.

Sanction of Estimate for the Supply of Water to Gandasi Shandy.

*Q.—513. Sri H. R. KESHAVA MURTHY (Gandasi).—

Will the Government be pleased to state :—

(a) whether an estimate has been sanctioned to supply water to Gandasi Shandy ;

(b) if so, when the estimate was sanctioned ;

(c) the reasons for the delay in execution of the work ;

(d) time required for the completion of the work ?

A.—Sri RAMAKRISHNA HEGDE (Minister for Development, Panchayati Raj and Co-operation).—

(*a*) Yes.

(*b*) On 28-3-1961.

(*c*) 1. Want of response to tenders called for.

2. Non-availability of cement and steel.

3. Want of power supply.

(*d*) About six months from now, provided the necessary machinery is received in time.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟು ಸಲ ಟೆಂಡರ್ ಕರೆಯಲಾಯಿತು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಒಂದು ಸಲ.

Sri D. PARAMESWARAPPA.—When were the tenders called for in this case ?

Sri RAMAKRISHNA HEGDE.—The date is not available with me.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಟೆಂಡರ್ ಒಂದು ಸಾರಿ ಕರೆದು ಯಾರೂ ಬಾರದಿದ್ದರೆ ಪೀಸ್ ವರ್ಕ್ ಕೊಡುತ್ತೀರಿ. ಇನ್ನೊಂದು ಸಲ ಟೆಂಡರ್ ಕರೆಯಬಾರದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕರೆಯಬಹುದು.

Sri S. RAJAGOPAL.—May I know the estimated amount ?

Sri RAMAKRISHNA HEGDE.—I am afraid that is not available here because the question put is only with regard to delay.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟು ವರ್ಷಗಳಿಂದ ಜನರು ಇದನ್ನು ಕೇಳುತ್ತಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—1961ರಲ್ಲಿ ಅಂದಾಜು ಮಂಜೂರಾಗಿದೆ, ಅದಕ್ಕೆ ಒಂದೆರಡು ವರ್ಷ ಮೊದಲನಿಂದ.

Sri SANJEEVANATH AIKALA.—When there was shortage of steel and cement, how can the Government expect tenderers to take up work?

[*No answer*].

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವಿದ್ಯುಚ್ಛಕ್ತಿ ಮತ್ತು ಸಿಮೆಂಟು ನರಬರಾಯಿ ಮಾಡುವ ಅಧಿಕಾರ ಸರ್ಕಾರಕ್ಕೇ ಇದೆ. ಅದರೆ ಅದು ದೊರೆತಿಲ್ಲ ಎಂದು ಉತ್ತರ ಕೊಡರಾಗಿದೆ. ಅಷ್ಟೊಂದು ಅಭಾವ ಇದೆಯೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ದೇಶದಲ್ಲಿ ಅಭಾವ ಇರುವುದು ಎಲ್ಲರಿಗೂ ಗೊತ್ತಿದೆ. ಸಮಯಕ್ಕೆ ಸರಿಯಾಗಿ ಎಷ್ಟು ಬೇಕೋ ಅಷ್ಟು ಸಿಕ್ಕಲಲ್ಲ. ಕೋಟಾ ಬೇರೆಬೇರೆ ಕಡೆಗಳಿಗೆ ಹಂಚುವಾಗ ಒಂದೊಂದು ಸಲ ಎಲ್ಲಾ ಕಡೆಗೂ ಹಂಚುವುದಕ್ಕಾಗುವುದಿಲ್ಲ.

Sri D. PARAMESWARAPPA.—May I know what is the total amount of cement and steel required to complete the work ?

Sri RAMAKRISHNA HEGDE.—It may not be a huge quantity.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ನಂತೆಯಲ್ಲಿ 20-30 ಸಾವಿರ ಜನಗಳೇನು ಸೇರುತ್ತಾರೆ ಅವರಿಗೆ ನೀರು ದೊರೆಯದೆ ನೂರಾರು ವರ್ಷಗಳಿಂದ ಗಾಡಿಗಳಲ್ಲಿ ತಂದು ಒದಗಿಸುತ್ತಿದ್ದಾರೆ. ಅದುದರಿಂದ ಬೇಗ ನೀರು ನರಬರಾಜು ಮಾಡುತ್ತಿರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆದಷ್ಟು ಬೇಗ ಸೂಡುವುದಾಗಿ ಹೇಳಿದ್ದೇನೆ.